2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.29/2017
ಪಿ.ಡಬ್ಲೂ.03
ಸಿ.ಡಬ್ಲೂ.01

ಇಂದು ದಿನಾಂಕ 23-10-2020 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.
ಪಾಟೀ ಸವಾಲುಃ ಶ್ರೀ.ಎಸ್.ಆರ್.ಕೆ. ವಕೀಲರಿಂದ ಆರೋಪಿ ಪರವಾಗಿ

1) ಚಿಮ್ಮಲಗಿ ಗ್ರಾಮದ ಆರ್.ಸಿ.ನಂ.2 ದಲ್ಲಿ ನಾನು ವಾಸ ಮಾಡುತ್ತೇನೆ ಎಂಬುದು ಸರಿ.
2) ಆರೋಪಿತರೂ ಸಹ ಅದೇ ಆರ್.ಸಿ.ನಂ.2 ರಲ್ಲಿ ವಾಸ ಮಾಡುತ್ತಾರೆ ಎಂಬುದು ಸರಿ.
3) ಸರಕಾರದವರು ನಿವೇಶನಗಳನ್ನು ಹಂಚಿರುತ್ತಾರೆ ಎಂಬುದು ಸರಿ.
4) ಸದರಿ ನಿವೇಶನಗಳಲ್ಲಿ ಆರೋಪಿತರು ತಮ್ಮ ಮನೆಯನ್ನು ಕಟ್ಟಿಕೊಂಡು, ನಾವು ನಮ್ಮ ನಿವೇಶನದಲ್ಲಿ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದೇವೆ ಎಂಬುದು ಸರಿ.
5) ನಿವೇಶನ ನಂ.209(ಎ) ಮತ್ತು 210(ಎ) ಗಳು ಆರ್.ಸಿ.ನಂ.2 ರಲ್ಲಿ ಇದ್ದು, ಅವುಗಳ ವಿಚಾರವಾಗಿ ಆರೋಪಿತರಿಗೂ ಮತ್ತು ನಮಗೂ ನ್ಯಾಯವಿರುತ್ತದೆ ಎಂಬುದು ಸರಿ.
6) ಆ ಕುರಿತು ಬಾಗೇವಾಡಿ ನ್ಯಾಯಾಲಯದಲ್ಲಿ ಸಿವ್ಹಿಲ್ ದಾವೆ ಇದ್ದು, ಅದು ಬಾಗೇವಾಡಿ ನ್ಯಾಯಾಲಯದಲ್ಲಿ ಮುಕ್ತಾಯಗೊಂಡಿರುತ್ತದೆ.
7) ಆ ದಾವೆ ಇನ್ನೂ ಮುಗಿದಿರುವುದಿಲ್ಲ ಎಂಬುದು ಸರಿಯಲ್ಲ.
8) ಸದರಿ ದಾವೆಯ ಸಂಖ್ಯೆ ಅಸಲ ದಾವಾ ನಂ.431/2015 ಇರುತ್ತದೆ ಎಂಬುದು ಸರಿ.
9) ಸದರಿ ಎರಡು ನಿವೇಶನಗಳು ಆರೋಪಿತರಿಗೆ ಮಂಜೂರಾಗಿದ್ದು ಅದಕ್ಕೆ ನಾವು ಯಾವುದೇ ರೀತಿಯಲ್ಲಿ ಸಂಬಂಧವಿರುವುದಿಲ್ಲ ಎಂಬುದು ಸರಿಯಲ್ಲ.
10) ಆ ಜಾಗದ ವಿಚಾರವಾಗಿ ನಮಗೂ ಮತ್ತು ಆರೋಪಿತರಿಗೂ ಮನಸಾ ಮನಸ್ಸು ಸರಿ ಇರುವುದಿಲ್ಲ ಎಂಬುದು ಸರಿ.
11) ಸದರಿ ನಿವೇಶನಗಳನ್ನು ಹೇಗಾದರೂ ಮಾಡಿ ನಾವುಕ ಬಳಿಸಬೇಕು ಎಂಬ ಉದ್ದೇಶದಿಂದ ಒಂದು ಅವಕಾಶವನ್ನು ಕಾಯುತ್ತಾ ಇದ್ದೇವು ಎಂಬುದು ಸರಿಯಲ್ಲ.
12) ನನಗೆ ಒಕ್ಕಲುತನವಿರುತ್ತದೆ.
13) ಅದಕ್ಕೆ ಬೇಕದಾ ಎತ್ತು, ಗಾಡಿ, ಒಕ್ಕಲುತನ ಪರಿಕರಗಳು ಇರುತ್ತವೆ ಎಂಬುದು ಸರಿ.
14) ನನ್ನ ಜಮೀನುಗಳು ಒಂದು ಊರಿನಿಂದ ಎರಡು ಕಿ.ಮೀ ಅಂತರದಲ್ಲಿ ಮತ್ತು ಇನ್ನೊಂದು ಜಮೀನು ಮೂರು ಕಿ.ಮೀ ಅಂತರದಲ್ಲಿ ಇರುತ್ತವೆ.

15) ನಾವು ನಮ್ಮ ಜಮೀನುಗಳಿಗೆ ಒಕ್ಕಲುತನದ ಎಲ್ಲಾ ಪರಿಕರಗಳನ್ನು ಎತ್ತಿನ ಗಾಡಿಯಲ್ಲಿ ಹಾಕಿಕೊಂಡು ಕಚ್ಚಾ ರಸ್ತೆಯಿಂದ ಹೋಗುತ್ತಿರುತ್ತೇವೆ ಎಂಬುದು ಸರಿ.

16) ಮಳೆಗಾಲದಲ್ಲಿ ಅಲ್ಲಿ ಸಾಕಷ್ಟು ತೆಗ್ಗುಗಳಾಗಿರುತ್ತವೆ ಎಂಬುದು ಸರಿ.

17) ದಿನಾಂಕಃ **10-08-2016** ರಂದು ಬೆಳಿಗ್ಗೆ ಸುಮಾರು **5-00** ರಿಂದ **6-00** ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ತಾಯಿ, ನನ್ನ ಹೆಂಡತಿ, ಅಣ್ಣತಮ್ಮಂದಿರು ಮತ್ತು ನನ್ನ ಸಹೋದರರು ಹಾಗೂ ಕುಟುಂಬದವರು ಎಲ್ಲರೂ ಎತ್ತಿನ ಗಾಡಿಯಲ್ಲಿ ಹೋಗುವಾಗ ಸದರಿ ಗಾಡಿಯು ಆಯತಪ್ಪಿ ಮುಗುಚಿ ಬಿದ್ದಿದ್ದರಿಂದ ಅದರಲ್ಲಿ ನಾವು ಗಾಯಗೊಂಡಿರುತ್ತೇವೆ ಎಂಬುದು ಸರಿಯಲ್ಲ.

18) ಆ ನಂತರ ನಾವು ಮನೆಗೆ ಬಂದು ನಾವು ನಮ್ಮ ಕುಟುಂಬದವರೆಲ್ಲರೂ ಸೇರಿ ಮುಂದೆ ಏನು ಮಾಡಬೇಕು ಎಂದು ವಿಚಾರಿಸಿರುತ್ತೇವೆ ಎಂಬುದು ಸರಿಯಲ್ಲ.

19) ಆರೋಪಿತರಿಗೆ ಹೀಗೆಯೇ ಬಿಟ್ಟರೇ ಸರಿ ಹೋಗುವುದಿಲ್ಲವಾದ್ದರಿಂದ ಇದೇ ಅವಕಾಶವನ್ನು ಬಳಸಿಕೊಳ್ಳುವುದು ಉತ್ತಮವೆಂದು ತೀರ್ಮಾನಿಸಿ ನಾವೇಲ್ಲರೂ ಬಾಗಲಕೋಟ ಆಸ್ಪತ್ರೆಗೆ ಹೋಗಿ ಅಲ್ಲಿ ಅವರ ವಿರುದ್ದ ನಮ್ಮ ಜೊತಗೆ ಜಗಳ ಕಾಯ್ದು, ಹಲ್ಲೆ ನಡೆಸಿ, ಅವಾಚ್ಯ ಶಬ್ದಗಳಿಂದ ಬೈದು, ಪ್ರಾಣದ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿರುತ್ತೇವೆ ಎಂಬುದು ಸರಿಯಲ್ಲ.

20) ಪಿರ್ಯಾದಿಯಲ್ಲಿ ನಮೂದಾಗಿರುವ ಎಲ್ಲಾ ವಿಚಾರಗಳು ಖೊಟ್ಟಿರುತ್ತವೆ ಎಂಬುದು ಸರಿಯಲ್ಲ.

21) ಆರೋಪಿತರು ಅಂಬಿಗೇರ ಜನಾಂಗದವರು, ಅವರು ಪ್ರವರ್ಗ-**1**. ನಮ್ಮ ಗ್ರಾಮ ಮುಳುಗಡೆ ಆಗಿ ಎಲ್ಲ ಜನರೂ ಚಿಮ್ಮಲಗಿಗೆ ವಲಸೆ ಬಂದಿದ್ದಾರೆ. ನಮಗೆ **209** ಮತ್ತು **210** ಪ್ಲಾಟ್ ಸಂಬಂಧಪಟ್ಟಿದ್ದವು ಆಗಿರುತ್ತವೆ, ಸದರಿ ಪ್ಲಾಟಗಳನ್ನು ಸರ್ಕಾರದವರು ನಮ್ಮ ಗ್ರಾಮ ಮುಳುಗಡೆ ಆಗಿದ್ದರಿಂದ ಮಂಜೂರು ಮಾಡಿದ್ದಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

22) ದಿನಾಂಕ 10.08.2016 ರಂದು ಬೆಳಿಗ್ಗೆ 7 ಗಂಟೆಗೆ ನಾನು ಸಂಡಾಸಿಗೆ ಹೊರಟಾಗ, 1 ನೇ ಆರೋಪಿ ಶೇಖಪ್ಪ ಬಸಪ್ಪ ಸಂಗಣ್ಣವರ ಬಂದು ನನಗೆ ನಿಲ್ಲು ಮಗನೇ ಎಂದು ಹೇಳಿದ, ಶೇಖಪ್ಪ ಬಸಪ್ಪ ಸಂಗಣ್ಣವರ ಜೊತೆ ಉಳಿದ 20 ಜನರೂ ಸಹಿತ ಬಂದರು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

23) ಶೇಖಪ್ಪ ಬಸಪ್ಪ ಸಂಗಣ್ಣವರ ಕಬ್ಬಿಣದ ರಾಡಿನಿಂದ ನನ್ನ ಎಡಗೈ ಮೊಣಕೈಗೆ ಹೊಡೆದ, ಶೇಖಪ್ಪ ನನ್ನ ಕಾಲಿಗೆ ಸಹಿತ ಹೊಡೆದ, 2 ನೇ ಆರೋಪಿ ನನಗೆ ಕಟ್ಟಿಗೆಯಿಂದ ನನ್ನ ತಲೆಯ ಹಿಂಭಾಗಕ್ಕೆ ಹೊಡೆದ ನಾನು ಚೀರಾಟ ಮಾಡಿದಾಗ, ನನ್ನ ತಮ್ಮ ಹಣಮಂತ ಮೂರಬಟ್ಟಿ ಓಡಿ ಬಂದು, ನನ್ನನ್ನು ಬಿಡಿಸಲು ಬಂದಾಗ, 3 ನೇ ಆರೋಪಿ ನನ್ನ ತಮ್ಮನಿಗೆ ಬಡಿಗೆಯಿಂದ ಹೊಡೆದ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

24) ನನ್ನ ತಮ್ಮನ ಹೆಂಡತಿ ಮಹಾದೇವಿ ಬಂದಾಗ, ಆಕೆಗೆ 4 ನೇ ಆರೋಪಿ ಬಡಿಗೆಯಿಂದ ಹೊಡೆದ, ಆಕೆಯನ್ನು ಎಳೆದಾಡಿದ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

25) ನನ್ನ ತಮ್ಮನ ಮಗಳು ಚಂದ್ರಕಲಾ ಬಂದಾಗ, ವಿಠಲ ಸೂರಪ್ಪ ಸಂಗಣ್ಣವರ ಕಟ್ಟಿಗೆಯಿಂದ ಆಕೆಯ ಕಾಲಿಗೆ ಹೊಡೆದು ಎಳೆದುಹಾಕಿದ, ಆಗ ನನ್ನ ತಾಯಿ ಬಿಡಿಸಲು ಬಂದಾಗ, ನನ್ನ ತಾಯಿಗೆ ಬಸವರಾಜ ಸೂರಪ್ಪ ಸಂಗಣ್ಣವರ ಕಬ್ಬಿಣದ ರಾಡ್‌ದಿಂದ ಎರಡೂ ಕೈಗಳಿಗೆ ಹೊಡೆದ, ಆಗ ನನ್ನ ಹೆಂಡತಿ ನೀಲಮ್ಮ ಬಂದಾಗ ಆಕೆಗೆ 7 ನೇ ಆರೋಪಿ ಸಂಜೀವಪ್ಪ ಆಕೆಯನ್ನು ಎಳೆದಾಡಿ ಅವಮಾನ ಮಾಡಿದನು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

26) ಆತನ ಜೊತೆ ಸಂಗವ್ವ ಇದ್ದಳು ಆಕೆ ನನ್ನ ಹೆಂಡತಿಗೆ ಕಲ್ಲು ಒಗೆದಳು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

27) ಸಂಗಪ್ಪ ಸೋಮಪ್ಪ ಬಾಗಿ ಇವನು ಸಹಿತ ಜಗ್ಗಾಡಿ ಅವಮಾನ ಮಾಡಿದ, ಬಿಡಿಸಲು ನನ್ನ ತಮ್ಮನ ಮಗ ಭೀಮರಾಯ ಬಂದಾಗ, 9 ನೇ ಆರೋಪಿ ಹಾಗೂ ಯಲ್ಲಪ್ಪ ದುಂಡಪ್ಪ ಸಂಗಣ್ಣವರ ಭೀಮರಾಯನಿಗೆ ಕಲ್ಲಿನಿಂದ ಹೊಡೆದರು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

28) ಆರೋಪಿಗಳು ನಮಗೆ ಜಾತಿಯೆತ್ತಿ ಬೈಯ್ದರು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

29) ನಮಗೆ ಬೈಯ್ದವರು ಅಂದರೆ, 3 ನೇ ಆರೋಪಿ ರೇಣುಕಾ, ನಂತರ ಶೋಭಾ, ಗೌರವ್ವ, ಮಹಾದೇವಿ, ಸಂಗವ್ವ ಮಾಗಿ, ಕಲ್ಲವ್ವ ಸಂಗಣ್ಣವರ, ಯಮನವ್ವ ಸಂಗಣ್ಣವರ

ರವರುಗಳು ಅವಾಚ್ಯ ಶಬ್ದಗಳಿಂದ ಬೈಯ್ದು, ಕೈಯಿಂದ ಹೊಡಿ-ಬಡಿ ಮಾಡಿದ್ದಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

30) ಶಿವಪ್ಪ ಶಿವಣಗೌಡ, ಶಂಕರಗೌಡ ಪಾಟೀಲ, ಗುಂಡಪ್ಪ ಬಿಡಿಸಲು ಬಂದರು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

31) ನಂತರ ಗಾಯಾಳುಗಳನ್ನು ನಿಡಗುಂದಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರು ಹಿಡಿಯಲಿಲ್ಲ, ಕಾರಣ ಬಾಗಲಕೋಟೆಗೆ ಕರೆದುಕೊಂಡು ಹೋಗಲಾಯಿತು, ಅಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲಾಯಿತು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

32) ಆಗ ನಾನು ಬಾಗಲಕೋಟೆಯ ಸರ್ಕಾರಿ ಆಸ್ಪತ್ರೆಗೆ ಪೋಲಿಸರು ಬಂದಿದ್ದು, ಅವರಿಗೆ ಫಿರ್ಯಾದಿಯನ್ನು ಕೊಟ್ಟಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

33) ಮೊದಲು ನಾವು ಆಟೋದಲ್ಲಿ ನಿಡಗುಂದಿ ಸರಕಾರಿ ದವಾಖಾನೆಗೆ ಹೋಗಿ ಅಲ್ಲಿನಿಂದ ಬಾಗಲಕೋಟೆಗೆ ಅಂಬ್ಯೂಲೇನ್ಸ್ ನಲ್ಲಿ ಹೋಗಿರುತ್ತೇವೆ.

34) ನಿಡಗುಂದಿ ಆಸ್ಪತ್ರೆಗೆ ಪೋಲಿಸರೇ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ.

35) ನಮ್ಮೂರಿಗೆ ಪೋಲಿಸರು ಬೆಳಿಗ್ಗೆ 7-00 ಗಂಟೆ ಸಮಯದಲ್ಲಿ ಬಂದಿದ್ದರು.

36) ನಿಡಗುಂದಿ ಸರಕಾರಿ ಆಸ್ಪತ್ರೆಯಲ್ಲಿ ನಮಗೆ ಗಾಯವಾಗಿರುವ ಕುರಿತು ಯಾರೂ ವಿಚಾರಣೆ ಮಾಡಿರುವುದಿಲ್ಲ, ಆದರೆ ಬಾಗಲಕೋಟೆಯ ಆಸ್ಪತ್ರೆಯಲ್ಲಿ ಪಿ.ಎಸ್.ಐ.ರವರು ಬಂದು ಕೇಳಿರುತ್ತಾರೆ.

37) ನಿಡಗುಂದಿ ಆಸ್ಪತ್ರೆಯಲ್ಲಿ ಗಾಯವಾಗಿರುವ ಕಾರಣ, ವೈದ್ಯರು ಕೇಳಿದ್ದು, ಆಗ ನಾವು ಎತ್ತಿನ ಗಾಡಿಯಿಂದ ಬಿದ್ದು ಗಾಯಗೊಂಡಿರುತ್ತೇವೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

38) ಪೋಲಿಸರು ಬಾಗಲಕೋಟೆಯ ಆಸ್ಪತ್ರೆಯಲ್ಲಿ ನನ್ನ ಪುನಃ ಹೇಳಿಕೆಗಳನ್ನು ಪಡೆದಿರುತ್ತಾರೆ ಎಂದರೆ ಹೇಳಿಕೆಗಳನ್ನು ದಿನಾಂಕಃ 11-08-2016 ರಂದು ನನ್ನ ಪುನಃ ಹೇಳಿಕೆಗಳನ್ನು ಪಡೆದಿರುತ್ತಾರೆ ಎಂಬುದು ಸರಿಯಲ್ಲ.

(ಈ ಹಂತದಲ್ಲಿ ಪ್ರಸ್ತುತ ಸಾಕ್ಷಿಗೆ ಸದರಿ ದಿನಾಂಕಃ 11.08.016 ರ ಪುನಃ ಹೇಳಿಕೆಯ ಕೊನೆಯ ಭಾಗವನ್ನು ಕನ್ಫರೆಂಟ್ ಮಾಡಲು ಇಚ್ಚಿಸಿರುತ್ತಾರೆ. ಪ್ರಸ್ತುತ ಸಾಕ್ಷಿಯು ದಿನಾಂಕಃ 11-08-2016 ರಂದು ಹೇಳಿಕೆಯನ್ನೇ ನೀಡಿರುವುದಿಲ್ಲ ಎಂದು ಸಂಪೂರ್ಣ ಹೇಳಿಕೆಯನ್ನೇ ಅಲ್ಲಗಳೆದ ನಂತರ

ಆತನಿಗೆ ಆರೋಪಿ ಪರ ವಕೀಲರಿಂದ ಕನ್ವರೆಂಟ್ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವಾದ್ದರಿಂದ ಅವರ ಕನ್ವರೆಂಟ್ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಪರಿಗಣಿಸಿ, ಆದರಲ್ಲಿನ ಭಾಗ ಕನ್ವರೆಂಟ್ ಮಾಡಲು ಕೇಳಿರುವ ಮನವಿಯನ್ನು ತೀರಸ್ಕರಿಸಲಾಗಿರುತ್ತದೆ.)

39) ನಾನು ಪೋಲಿಸರ ಮುಂದೆ ಘಟನೆಯ ಸಮಯದಲ್ಲಿ 12 ಜನ ಇರಲಿಲ್ಲ, ಕೇವಲ 08 ಜನ ಇದ್ದರು ಎಂದು ಪುನಃ ಹೇಳಿಕೆ ನೀಡಿರುತ್ತೇನೆ ಎಂಬುದು ಸರಿಯಲ್ಲ.

40) ಸದರಿ ಎರಡೂ ನಿವೇಶನಗಳನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿ, ಸುಳ್ಳು ಸಾಕ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

41) ನಮಗೆ ಯಾವುದೇ ಆಯುಧಗಳಿಂದ ಯಾವುದೇ ಆರೋಪಿತರು ಹಲ್ಲೆ ನಡೆಸಿರುವುದಿಲ್ಲ ಎಂಬುದು ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.